**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 46/2020**

| | | |
|---|---|---|
| ಸಾಕ್ಷಿಯ ಹೆಸರುಃ | ಹಣಮಂತ್ರಾಯ | ಫ್ರಾಸಾಃ 3 |
| ತಂದೆ/ಗಂಡನ ಹೆಸರುಃ | ಬೂದೆಪ್ಪ | ಚಾಸಾಃ 3 |
| ವಯಸ್ಸು ಃ | 51 ವರ್ಷ | ದಿಃ 15-03-2024 |
| ಉದ್ಯೋಗಃ | ಕೂಲಿಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಸೈದಾಪೂರ | |

<u>**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**</u>

ನನಗೆ ಚಾಸಾಃ 2 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ. ಸುಮಾರು 5 ವರ್ಷದ ಹಿಂದೆ ಜಗಳವಾದಾಗ ನಾವು ಅಲ್ಲಿಂದ ಹೋಗುವಾಗ ಪೊಲಿಸರು ನಮಗೆ ಸುಮಾರು 4.00 ಗಂಟೆಗೆ ಪಂಚನಾಮೆಯ ಪಂಚರಾಗಲು ಕೇಳಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನಮ್ನು ತೋರಿಸಲಾಗಿ ಅದು ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಎಂದು, ಸಾಕ್ಷಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೊಲಿಸರು ಜಗಳವಾಗಿದ್ದರ ಬಗ್ಗೆ ನಮಗೆ ತಿಳಿಸಿರುತ್ತಾರೆ. ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ.

<u>**ಪಾಟಿ ಸವಾಲುಃ  ಆರೋಪಿ ಪರ ವಕೀಲರು ಶ್ರೀ. ಕೆ.ಬಿ.ಎ ಇವರಿಂದ.**</u>

1. ನನ್ನ ಊರು ಸೈದಾಪೂರ ಎಂದರೆ ಸರಿ.  ನನಗೆ ಚಾಸಾಃ 1 ರವರ ಪರಿಚಯವಿದೆ. ಸದರಿ ಘಟನಾ ಸ್ಥಳದಲ್ಲಿ ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ.  ನಾನು ಪೊಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ  ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**